


International Journal of Kannada Research
www.kannadajournal.com

ISSN: 2454–5813
IJKR 2019; 5(1): 101-102
© 2019 IJKR
www.kannadajournal.com
Received: 22-11-2018
Accepted: 24-12-2018

**ರಾಮರೆಡ್ಡಿ.ಕೆ.**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಎಸ್.ವಿ.ಎಸ್. ಬೆಳ್ಳುಬ್ಬಿ, ಮಹಾವಿದ್ಯಾಲಯ, ಸವದತಿ

**Correspondence**
**ರಾಮರೆಡ್ಡಿ.ಕೆ.**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ, ಕೆ.ಎಲ್.ಇ. ಸಂಸ್ಥೆಯ, ಎಸ್.ವಿ.ಎಸ್. ಬೆಳ್ಳುಬ್ಬಿ, ಮಹಾವಿದ್ಯಾಲಯ, ಸವದತಿ

# ವಿಜ್ಞಾನ ತಂತ್ರಜ್ಞಾನ ಹಾಗೂ ಸಾಹಿತ್ಯದ ಅಂತರ್ ಸಂಬಂಧ

**ರಾಮರೆಡ್ಡಿ.ಕೆ.**

ಪ್ರಸ್ತುತ ದಿನಗಳಲ್ಲಿ ಪ್ರಪಂಚವು ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗವೆನಿಸಿದೆ. ಇವುಗಳಿಲ್ಲದೆ ಬದುಕಲು ಸಾಧ್ಯವಿಲ್ಲದಷ್ಟು ಮನುಷ್ಯನ ಬದುಕಿನಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಹಾಸುಹೊಕ್ಕಾಗಿ ಬೆರೆತುಕೊಂಡಿದೆ. ಆಹಾರ, ಗಾಳಿ ಮತ್ತು ನೀರಿನಷ್ಟೇ ಜ್ಞಾನ, ಮಾಹಿತಿ ಇತ್ಯಾದಿಗಳು ನಮ್ಮ ಬದುಕಿಗೆ ಅವಶ್ಯವೆನಿಸಿವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳು ಪರಸ್ಪರ ಅವಲಂಬನೆಯಿಂದ ಬೆಳೆಯುತ್ತ ಸಾಗಿವೆ. ವಿಜ್ಞಾನ ಮತ್ತು ತಂತ್ರಜ್ಞಾನಗಳ ಪ್ರಗತಿಯು ಎಷ್ಟಿದೆಯೆಂದರೆ ಭಗವಂತನೇನಾದರು ಇದ್ದು ಭೂಮಿಗಿಳಿದು ಬಂದರೆ ಅವನೇ ಬೆರಗಾಗುವಷ್ಟು ಬೆಳೆದಿದೆ. ಹೀಗಿರುವಾಗ ಮಾನವನು ಕಾಲದೊಂದಿಗೆ ಸ್ಪರ್ಧಿಸುತ್ತಾ ಭೂಮಿ ಮತ್ತು ಅಂತರಿಕ್ಷವನ್ನೇ ತನ್ನದಾಗಿ ಮಾಡಿಕೊಳ್ಳಲು ಹೊರಟಿದ್ದಾನೆ. ಇದರಲ್ಲಿ ಈಗಾಗಲೇ ಸಾಕಷ್ಟು ಜಯವನ್ನೂ ಸಾಧಿಸಲು ಹೊರಟಿದ್ದಾನೆ. ಪ್ರಕೃತಿಯಲ್ಲಿ ಅಡಗಿರುವ ಅಜ್ಞಾತವಾಗಿದ್ದ ವಿಷಯಗಳನ್ನು ಅನಾವರಣಗೊಳಿಸುತ್ತಾ ಸಾಗುತ್ತಿದ್ದಾನೆ. ಈ ರೀತಿಯಾಗಿ ಬೆಳೆದ ಮಾನವನಿಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಎಲ್ಲಾ ಕ್ಷೇತ್ರದಲ್ಲೂ ವಿಸ್ತರಿಸುತ್ತಾ ಸಾಗಲು ಸಾಧ್ಯವಾಗುತ್ತಿದೆ.

- ಪ್ರಾಚೀನ ಕಾಲದಲ್ಲಿ ಈ ವಿಜ್ಞಾನ ಮತ್ತು ತಂತ್ರಜ್ಞಾನಗಳು ಇಷ್ಟು ಬೆಳೆದಿರಲಿಲ್ಲ. ಕಾಲಾನುಕ್ರಮೇಣ ಬೆಳೆದಿರುವ ವಿಜ್ಞಾನ ತಂತ್ರಜ್ಞಾನಗಳು ಎಲ್ಲ ವಲಯಗಳಲ್ಲಿ ವ್ಯಾಪಿಸಿಕೊಳ್ಳುತ್ತಾ ಸಾಗಿ ಇಂದು ಸಾಹಿತ್ಯ ಕ್ಷೇತ್ರವನ್ನೂ ಆವರಿಸಿಕೊಂಡಿದೆ ಅಥವಾ ಸಾಹಿತ್ಯ ಕ್ಷೇತ್ರವೂ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳುತ್ತ ಅಂತರ್ ಸಂಬಂಧವನ್ನು ಬೆಳೆಸಿಕೊಂಡಿದೆ ಎನ್ನಬಹುದು. ಪ್ರಾಚೀನ ಭಾರತದಲ್ಲಿ ವಿಜ್ಞಾನವನ್ನು ತೀವ್ರವಾಗಿ ಅಧ್ಯಯನ ಮಾಡಲಾದ ಸಾಹಿತ್ಯಗಳಲ್ಲಿ ಒಂದು ಎಂದು ಪರಿಗಣಿಸಲಾಗಿತ್ತು. ಆಗಿನ ದಿನಗಳಲ್ಲಿ ಅಂದು ಚಾಲ್ತಿಯಲ್ಲಿದ್ದ ರಾಜ ತಾಂತ್ರಿಕತೆ, ಆರ್ಥಿಕ ನೀತಿ ಮತ್ತು ರಕ್ಷಣಾ ನೀತಿಗೆ ಸಂಬಂಧಿಸಿದ ವಿಚಾರ ಕುರಿತು ಅನೇಕ ಗ್ರಂಥಗಳು ರಚನೆಯಾದವು. ಇಂತಹ ರಚನೆಗಳಲ್ಲಿ ನಮಗೆ ನೆನಪಿಗೆ ಬರೋದು ಕೌಟಿಲ್ಯ ಮತ್ತು ವಿಷ್ಣುಗುಪ್ತ ಎಂಬ ಇಬ್ಬರು ವಿದ್ವಾಂಸರು. ಇವರು ಬರೆದ ಕೃತಿ 'ಅರ್ಥಶಾಸ್ತ್ರ'. ಇನ್ನು ಕೆಲವೆಡೆ ಕೌಟಿಲ್ಯನ ವಿಚಾರಗಳು ಬಹು ಚಾಣಾಕ್ಷತನದಿಂದ ಕೂಡಿದ್ದುವಾಗಿದ್ದರಿಂದ 'ಚಾಣಕ್ಯ ನೀತಿ' ಅಥವಾ 'ಕುಟಿಲ ನೀತಿ' ಎಂದು ಪ್ರಸಿದ್ಧಿ ಪಡೆದಿವೆ. ಇವುಗಳು ಕೂಡ ಸಾಹಿತ್ಯಿಕ ಆಕರಗಳೆಂದು ಪರಿಗಣಿಸಬಹುದು.
- ಪಾಶ್ಚಾತ್ಯ ರಾಷ್ಟ್ರದಲ್ಲಿ ಪ್ಲೇಟೋ, ಅರಿಸ್ಟಾಟಲ್, ಹೋಮರ್, ಹೇಸಿಯಡ್ ಮುಂತಾದವರ ಕೃತಿಗಳಲ್ಲಿ ವಿಜ್ಞಾನದ ಬೇರುಗಳನ್ನು ಗುರುತಿಸಬಹುದು. ಇಟಲಿಯ ನವೋದಯದ ಅವಧಿಯಲ್ಲಿ ನಿಕೊಲೋ ಮಚಿಯವಲ್ಲಿಯು ರಾಜಕೀಯ ವಿಜ್ಞಾನಕ್ಕೆ ಒತ್ತು ನೀಡಬೇಕೆಂದು ನಿರೂಪಿಸಿದನು. ನಂತರ ಜ್ಞಾನೋದಯದ ಅವಧಿಯಲ್ಲಿ ವೈಜ್ಞಾನಿಕ ಪಲ್ಲಟವು ಪ್ರಮಾಣಕ ನಿರ್ಣಯಗಳ ಆಚೆಗೂ ರಾಜಕೀಯದ ಅಧ್ಯಯನವನ್ನು ಇನ್ನಷ್ಟು ಬೆಳೆಸಿತು. ವಿಶೇಷವಾಗಿ ಪ್ರಭುತ್ವದ ವಿಷಯಗಳ ಅಧ್ಯಯನಕ್ಕಾಗಿ, ಸಂಖ್ಯಾಶಾಸ್ತ್ರದ ಅಧ್ಯಯನ ಮತ್ತು ಮತಗಣನೆ ಹಾಗೂ ಮತದಾನಕ್ಕೆ ಅನ್ವಯಿಸಲಾಯಿತು.
- ಆಧುನಿಕ ಸಂದರ್ಭದಲ್ಲಿ ವಿಜ್ಞಾನವು ಭಾಷಾಶಾಸ್ತ್ರವನ್ನು ಆವರಿಸಿಕೊಂಡಿತು. ಹದಿನೆಂಟನೆಯ ಶತಮಾನದಲ್ಲಿ ಭಾಷಾಶಾಸ್ತ್ರ ಎನಿಸಿಕೊಳ್ಳುವ ಕ್ಷೇತ್ರವು ಭಾಷಾ ವಿಜ್ಞಾನವೆನಿಸಿಕೊಳ್ಳತೊಡಗಿತು. ಇದರ ಫಲವಾಗಿ ಸರ್ ವಿಲಿಯಂ ಜೋನ್ಸ್, ಫರ್ಡಿನಾಂಡ್ ಡೆ ಸಾಸ್ಸುರೆ, ನೋಮ್ ಚೋಮ್‌ಸ್ಕಿಯಂತಹವರು ಮಾಡಿದ ಭಾಷಾವಿಜ್ಞಾನ ಕ್ಷೇತ್ರದಲ್ಲಿನ ಕಾರ್ಯ ಆಧುನಿಕ ಜಗತ್ತಿನಲ್ಲಿ

ಹೊಸದೊಂದು ಆಲೋಚನೆಯನ್ನೇ ಹುಟ್ಟುಹಾಕಿತು. ಇವರೆಲ್ಲರ ಪ್ರಯತ್ನಗಳು ಭಾಷಾ ವಿಜ್ಞಾನದಲ್ಲಿ ಗಣಿತಶಾಸ್ತ್ರೀಯ ಮಾದರಿಯನ್ನು ಅನುಸರಿಸಿತ್ತು. ಭಾಷಾಶಾಸ್ತ್ರ ಮತ್ತು ವಿಜ್ಞಾನಗಳ ಸಹಭಾಗಿತ್ವದ ಕಾರಣದಿಂದ ಸಾಮಾಜಿಕ ಭಾಷಾಶಾಸ್ತ್ರ, ಜ್ಞಾನಗ್ರಹಣ ಭಾಷಾಶಾಸ್ತ್ರ ಮತ್ತು ಎಣಿಕೆಯ ಭಾಷಾಶಾಸ್ತ್ರ ಮುಂತಾದ ವಿಶೇಷ ಜ್ಞಾನಗಳು ಅಭಿವೃದ್ಧಿ ಹೊಂದಿದವು.

- **ವಿಕಾಸಗೊಳ್ಳುತ್ತಿರುವ ಅಧ್ಯಯನ ಶಿಸ್ತುಗಳು:** ಇಪ್ಪತ್ತನೆಯ ಶತಮಾನದ ಈಚೆಗೆ ಪ್ರಪಂಚದಲ್ಲಿ ಹಲವಾರು ಅಂತರ್ ಶಿಸ್ತೀಯ ವೈಜ್ಞಾನಿಕ ಕ್ಷೇತ್ರಗಳು ವಿಕಾಸಗೊಂಡವು. ಸಂವಹನ, ಮಾಹಿತಿ, ಮಾರುಕಟ್ಟೆ, ಸಾರ್ವಜನಿಕ ಸಂಬಂಧಗಳು, ಗಣಕ ವಿಜ್ಞಾನ ಮತ್ತು ಮತ್ತು ಆಧುನಿಕ ತಂತ್ರಜ್ಞಾನದಲ್ಲಿ ಬಹುಬಗೆಯ ಅಧ್ಯಯನ ಶಿಸ್ತು ನಡೆಯುತ್ತ ಸಾಗಿದುದು ಅಲ್ಲದೆ, ಅದರ ಫಲಿತಗಳು ಇಂದು ಎಲ್ಲ ವಯೋಮಾನದವರಿಗೆ ಲಭ್ಯವಾಗತೊಡಗಿದೆ.
- **ಜನಪದ (ಮೌಖಿಕ) ಸಾಹಿತ್ಯ :** ಪ್ರಾಚೀನ ಕಾಲದಿಂದಲೂ ಮೌಖಿಕ ಪರಂಪರೆಯಲ್ಲಿ ಉಳಿದುಕೊಂಡು ಬಂದಿದ್ದ ಅನೇಕ ಜ್ಞಾನ ಭಂಡಾರವು ಇಂದು ನಾವುಗಳು ದಾಖಲೀಕರಣದಂತ ಸೌಲಭ್ಯವನ್ನು ಬಳಸಿಕೊಂಡು ಉಳಿಸಿಕೊಳ್ಳಲು ಸಾಧ್ಯವಾಗಿದೆ.
- **ಜನಪದ ಪ್ರದರ್ಶನ ಕಲೆಗಳು:** ಭಾರತದಂತಹ ದೇಶದಲ್ಲಿ ಬಹುಭಾಷೆಯ, ಬಹು ಧರ್ಮೀಯರ ನಾಡಿನಲ್ಲಿ ವೈವಿಧ್ಯಮಯವಾದ ಆಚಾರ ವಿಚಾರಗಳು, ಸಂಪ್ರದಾಯಗಳು, ಕಲೆ–ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ಸರಳವಾಗಿ ತಲುಪಿಸಲು ವಿಜ್ಞಾನ ತಂತ್ರಜ್ಞಾನಗಳು ನೆರವಾಗಿವೆ.
- **ವಿಜ್ಞಾನ ಮತ್ತು ತಂತ್ರಜ್ಞಾನಗಳ ಸಾಹಚರ್ಯದಿಂದ ಸಾಹಿತ್ಯವು** ಸಾಕಷ್ಟು ಶ್ರೀಮಂತಗೊಂಡಿತು. ಹದಿನೆಂಟನೆಯ ಶತಮಾನದಿಂದೀಚೆಗೆ ನಡೆದ ಬದಲಾವಣೆಯ ಗಾಳಿ ಸಾಹಿತ್ಯ ಕ್ಷೇತ್ರವನ್ನು ವ್ಯಾಪಿಸಿ ಆಲೋಚನೆಯ ವಿಧಾನವನ್ನೇ ಬದಲಿಸಿತು. ಉಮರ್ ಖಯ್ಯಾಮ್ ಅವರ ಗಣಿತ ಪ್ರೀತಿ, ಸಂಸರ ನಾಟಕಗಳು, ಕುವೆಂಪು ಅವರ ಶೂದ್ರ ತಪಸ್ವಿ, ಜಲಗಾರ, ಬೆರಳ್ಗೆ ಕೊರಳ್ ಮತ್ತು ಅವರ ಕವಿತೆಗಳು, ಎ.ಎನ್.ಮೂರ್ತಿರಾವ್ ಅವರ ದೇವರು, ಶಿವರಾಮ ಕಾರಂತರ ವಿಜ್ಞಾನ ಮತ್ತು ಪರಿಸರ ಕುರಿತ ಲೇಖನಗಳು, ಬಿ.ಜಿ.ಎಲ್.ಸ್ವಾಮಿ ಅವರ ಹಸಿರು ಹೊನ್ನು, ಪೂರ್ಣಚಂದ್ರ ತೇಜಸ್ವಿ ಅವರ ಮಿಲೆನಿಯಂ ಸರಣಿಯ ಕೃತಿಗಳು, ನಾಗೇಶ ಹೆಗಡೆ ಅವರ ಅಂಕಣ ಬರಹಗಳು, ಅಸಂಖ್ಯ ಮಹಿಳಾ ಬರಹಗಾರರ ಕೃತಿಗಳು ಮತ್ತು ತೃತೀಯ ಲಿಂಗಿಗಳ ಬದುಕಿನ ಕುರಿತಾದ ಕೃತಿಗಳು ನಮ್ಮ ಅರಿವಿನ ನೆಲೆಯನ್ನು ವಿಸ್ತರಿಸಿದವು.

ಮಹಾ ಮಾನವತಾವಾದಿ ಎಂದು ನಾವೆಲ್ಲ ಕರೆಯುವ ಕುವೆಂಪು ಅವರು ವಿಜ್ಞಾನ ಮತ್ತು ತಂತ್ರಜ್ಞಾನಗಳ ಅರಿವನ್ನಿಟ್ಟುಕೊಂಡು 'ಮನುಜ ಮತ – ವಿಶ್ವಪಥ' ಎಂಬ ಮಹತ್ವದ 'ಮಾನವತಾ ವಾದದ' ಘೋಷವಾಕ್ಯವನ್ನು ಜಗತ್ತಿಗೆ ನೀಡಿ ಹೊಸದೊಂದು ಮಾರ್ಗವನ್ನು ತೋರಿಸಿದರು. ಮುಂದೆ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯದ ಕಾಲದ ಸಾಹಿತ್ಯವು ವೈವಿಧ್ಯಮಯವಾದ ಸಾಹಿತ್ಯವನ್ನು ಸೃಷ್ಟಿಸಿತು. ಧಾರ್ಮಿಕ, ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಸಮಾನತೆಗಳನ್ನು ಮೀರಿ ನಿಲ್ಲುವಂತಹ ವಿಚಾರ ಶಕ್ತಿಯನ್ನು ಅನೇಕ ಹಿಂದುಳಿದ ಹಾಗೂ ದುರ್ಬಲ ಸಮುದಾಯಗಳಿಗೆ ಶಕ್ತಿಯಾಗಿ ಸಾಹಿತ್ಯವು ನೆರವಿಗೆ ಬಂದಿತು.

ಆಧುನಿಕ ಜಗತ್ತಿನಲ್ಲಿ ಸೂರ ಸಂಪರ್ಕ ಸಾಧನಗಳ ಉತ್ಪಾದನೆ ಮತ್ತು ಬಳಕೆ ಹೆಚ್ಚಾದಂತೆಲ್ಲ ಇಡೀ ವಿಶ್ವವೇ ಒಂದು ಗ್ರಾಮವಾಗಿ ಪರಿವರ್ತನೆಗೊಂಡಿತು. ಈ ವಿಶ್ವ ಗ್ರಾಮಕ್ಕೆ ಒಡೆಯನಾರು? ವಿಚಾರವೋ, ತಂತ್ರಜ್ಞಾನವೋ, ವಿಜ್ಞಾನವೋ ಅಥವಾ ಮಾನವನೋ ಎಂಬ ಯಕ್ಷಪ್ರಶ್ನೆ ನಮ್ಮ ಮುಂದಿದೆ. ಇವುಗಳ ಮಧ್ಯೆ ಕನ್ನಡ ಸಾಹಿತ್ಯವು ತಾಂತ್ರಿಕ ಜಗತ್ತಿನಲ್ಲಿ ತನ್ನ ಬೆಳವಣಿಗೆಯನ್ನು ಅಡೆತಡೆಯಿಲ್ಲದೆ ಸಾಗಿಸಿಕೊಂಡು ಮುನ್ನಡೆದಿದೆ.

ಮೌಖಿಕ, ಕಲ್ಲಚ್ಚು, ಮುದ್ರಣ ಯಂತ್ರದಿಂದ ಇಂದಿನ ಡಿಜಿಟಲ್ ಮುದ್ರಣದವರೆಗೆ ಕನ್ನಡ ಸಾಹಿತ್ಯವು ನಿರಂತರ ಬೆಳೆಯುತ್ತ ಸಾಗಿದೆ. ಇಂದು ವಾಟ್ಸಪ್, ಫೇಸ್ ಬುಕ್, ಬ್ಲಾಗ್, ವೆಬ್‌ಸೈಟ್ ಮತ್ತು ವೆಬ್ ಮ್ಯಾಗ್ಜಿನ್‌ಗಳಲ್ಲಿ ಹೊಸ ಸಾಹಿತ್ಯ ವಿವಿಧ ರೂಪಗಳಲ್ಲಿ ಹುಟ್ಟಿಕೊಳ್ಳುತ್ತಲೇ ಸಾಗಿದೆ.

ಹೀಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ಸಾಹಿತ್ಯದ ಜೊತೆಗೆ ಅಂತರ್ ಸಂಬಂಧವನ್ನು ಇಟ್ಟುಕೊಂಡು ತನ್ನ ಅಸ್ತಿತ್ವನ್ನು ಕಾಪಾಡಿಕೊಂಡಿದೆ. ಆ ಮೂಲಕ ಮನುಕುಲಕ್ಕೆ ಸರಿಯಾದ ಮಾರ್ಗದರ್ಶನವನ್ನು ನೀಡುತ್ತಾ ಸಾಗಿದೆ. ಇಂತಹ ಸಂದರ್ಭದಲ್ಲಿ ಪ್ರಾಣಿಗಳಿಗಿಂತ ಉನ್ನತವಾದ ರೀತಿಯಲ್ಲಿ ಬದುಕುತ್ತಿರುವ ನಾವುಗಳು ಅರಿವಿನ ನೆಲೆಗಳನ್ನು ವಿಸ್ತರಿಸಿಕೊಳ್ಳಬೇಕಾಗಿದೆ. ಆ ಅರಿವಿನಿಂದ ಸಮಾಜದಲ್ಲಿ ಯಾವುದೇ ಅಸಮಾನತೆಯನ್ನು ಹೊಂದದೆ ಸಮಾನತೆಯ ಆಶಯವನ್ನು ಸ್ಥಾಪಿಸಿ ಒಂದಾಗಿ ಬಾಳುವುದೇ ಮನುಕುಲದ ಜವಾಬ್ದಾರಿಯಾಗಿದೆ.

### ಆಕರ ಸಾಮಗ್ರಿಗಳು


1. ವಿಜ್ಞಾನದ ಹಾದಿಯಲ್ಲಿ ಮಹಾ ತಿರುವುಗಳು– ಟಿ.ಆರ್.ಅನಂತರಾಮು, ನವಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು. 2017.
2. ಇತಿಹಾಸದಲ್ಲಿ ವಿಜ್ಞಾನ– ಸಂಪುಟ 1,2,3,4– ಟಿ.ಆರ್.ಅನಂತರಾಮು, ಕುವೆಂಪು ಭಾಷಾ ಪ್ರಾಧಿಕಾರ, ಬೆಂಗಳೂರು, 2012.
3. ಶೂದ್ರ ತಪಸ್ವಿ – ಕುವೆಂಪು, ಉದಯರವಿ ಪ್ರಕಾಶನ, ಮೈಸೂರು.
4. ಚಿಗುರಿದ ಕನಸು – ಶಿವರಾಮಕಾರಂತ.
5. ಸಂಸರ ನಾಟಕಗಳು–
6. ಇರುವುದೊಂದೆ ಭೂಮಿ– ನಾಗೇಶ ಹೆಗಡೆ
7. ಶತ್ರುವಿಲ್ಲದ ಸಮರ – ನಾಗೇಶ ಹೆಗಡೆ
8. ಅಂತರ್ಜಾಲದಿಂದ ಲಭ್ಯವಾದ ಮಾಹಿತಿ